ನಿಂತ.

"ಸಾಥಿಯಾ, ನೀನು ಎಲ್ಲಿಗೆ ಹೋಗಿದ್ದೆ?"

"ಕಾಶೀರಾಮ ಅವರು ಬಿಲ್ಡಿಂಗ್‌ನಲ್ಲಿ ಮಲಗಬಾರದೆಂದು ತಾಕೀತು ಮಾಡಿದ್ದಾರೆ. ಸೊಸೈಟಿಯ ಜನರು ಆ ರೀತಿ ತಕರಾರು ಮಾಡುತ್ತಿದ್ದಾರೆಂದು ಕಾಶೀರಾಮ ಹೇಳುತ್ತಿದ್ದರು."

"ಹಾಗಾದರೆ ನೀನು ಈಗ ಎಲ್ಲಿ ಮಲಗುತ್ತಿರುವಿ?"

"ಹೈವೇಯ ಬದಿಯಲ್ಲಿರುವ ಕೃಷ್ಣಮಂದಿರದಲ್ಲಿ ಮಲಗುತ್ತಿದ್ದೇನೆ. ಇತ್ತೀಚೆಗೆ ಕೆಲದಿನಗಳಿಂದ ನನ್ನ ಎರಡೂ ಮೊಳಕಾಲುಗಳೂ ನೋಯುತ್ತಿವೆ. ಮೊದಲಿನಂತೆ ನನಗೀಗ ಕೆಲಸ ಮಾಡಲಾಗುತ್ತಿಲ್ಲ. ಅಲ್ಲಿಯೇ ಮಂದಿರದ ಎದುರು ಕುಳಿತು ಭಕ್ತರ ಪಾದರಕ್ಷೆ ಕಾಯುತ್ತೇನೆ. ಅವರು ಕೊಟ್ಟಷ್ಟು ಹಣವನ್ನು ದೇವರ ಪ್ರಸಾದವೆಂದು ಸ್ವೀಕರಿಸಿ ಜೀವನ ಸಾಗಿಸುತ್ತಿದ್ದೇನೆ."

ನಾನು ಜೇಬಿನಲ್ಲಿ ಕೈ ತೂರಿಸಿ ಐವತ್ತರ ನೋಟೊಂದನ್ನು ತೆಗೆದು ಅವನಿಗೆ ಕೊಡುತ್ತ, "ಆಗಾಗ ಮನೆಯತ್ತ ಬರುತ್ತಿರು" ಎಂದೆ.

ನಾನಿತ್ತ ನೋಟನ್ನು ಸಂತೋಷದಿಂದ ಸ್ವೀಕರಿಸಿ ಜೇಬಿನಲ್ಲಿಟ್ಟುಕೊಂಡು ಸಾಥಿಯಾ ಮೆಲ್ಲಗೆ ಕೋಲಿನ ಸಹಾಯದಿಂದ ಮುಂದೆ ಸಾಗಿದ.

★★★

ನನ್ನ ರಜೆ ಮುಗಿದಿತ್ತು. ಕಲ್ಯಾಣಕ್ಕೆ ಹೋಗಿ ಡ್ಯೂಟಿಗೆ ಹಾಜರಾಗುವುದು ಅಗತ್ಯದ್ದಾಗಿತ್ತು. ಇದೇ ಸಮಯದಲ್ಲಿ ಕಲ್ಯಾಣದಲ್ಲಿರುವ ಸುಷ್ಮಾಳ ಅಕ್ಕ ಹೊಸಮನೆಯನ್ನು ಖರೀದಿಸಿದ್ದಳು. ಅದರ ಗೃಹಪ್ರವೇಶಕ್ಕೆ ಬರಲು ಅವಳು ಆಮಂತ್ರಣಪತ್ರಿಕೆ ಕಳಿಸಿದ್ದಳು. ಆದುದರಿಂದ ಬಾಂದ್ರಾದ ಫ್ಲ್ಯಾಟಿಗೆ ಬೀಗ ಹಾಕಿ ನಾವಿಬ್ಬರೂ ಕಲ್ಯಾಣಕ್ಕೆ ಹೋಗಿದ್ದೆವು.

ಗೃಹಪ್ರವೇಶದ ಕಾರ್ಯಕ್ರಮ ಮುಗಿದ ಮೇಲೆ ಅಕ್ಕನ ಆಗ್ರಹದ ಕಾರಣ ಸುಷ್ಮಾ ಅವಳ ಮನೆಯಲ್ಲಿ ಕೆಲ ದಿನ ಉಳಿದಳು. ನಮ್ಮ ಬ್ಯಾಂಕು ನಾಲ್ಕು ಗ್ರಾಮಗಳಿಗೆ ಹೋಗಿ ಅಲ್ಲಿಯ ನಮ್ಮ ಶಾಖೆಗಳಿಗೆ ಭೇಟಿಯನ್ನಿತ್ತು ವರದಿಯನ್ನು ಸಲ್ಲಿಸುವ ಹೊಣೆಯನ್ನು ವಹಿಸಿತ್ತು. ಸುಮಾರು ಎಂಟು ದಿವಸಗಳ ನಂತರ ನಾವು ಬಾಂದ್ರಾದ ನಮ್ಮ ಫ್ಲ್ಯಾಟಿಗೆ ಹಿಂದಿರುಗಿದೆವು.

ಬೀಗ ತೆಗೆದು ಮನೆಯೊಳಗೆ ಪ್ರವೇಶಿಸುವಷ್ಟರಲ್ಲಿಯೇ ಮಮತಾ ಓಡುತ್ತ ಒಳಗೆ ಬಂದಳು.

"ಆಂಟಿ, ಆಂಟೀ, ನಿನಗೊಂದು ಕೆಟ್ಟ ಸುದ್ದಿ ಇದೆ" ಅಂದಳು ಮಮತಾ.

"ಏನದು, ಏನಾಯಿತು?" ಸುಷ್ಮಾ ಕೇಳಿದಳು.

"ಸಾಥಿಯಾ ತೀರಿ ಹೋದ" ಮಮತಾಳ ಕಣ್ಣುಗಳಿಂದ ಅಶ್ರುಗಳು ಧಾರೆಗಟ್ಟಿದವು.

"ಒಮ್ಮೆಲೇ ಅವನಿಗೆ ಏನಾಗಿತ್ತು?" ಸುಷ್ಮಾ ಆಶ್ಚರ್ಯದಿಂದ ಕೇಳಿದಳು.

"ಹಾರ್ಟ್ ಅಟ್ಯಾಕ್ ಆಗಿತ್ತು. ಸತ್ತು ನಾಲ್ಕು ದಿನಗಳಾದವು."

"ಹಾಗಾದರೆ ಅವನ ಅಂತ್ಯಸಂಸ್ಕಾರ?" ಸುಷ್ಮಾ ಕೇಳಿದಳು.

"ಅವನ ಅಂತ್ಯಸಂಸ್ಕಾರಕ್ಕೆ ಕಾಶೀರಾಮ ಸೊಸೈಟಿಯ ಸದಸ್ಯರಿಂದ ಚಂದಾಹಣ ಸಂಗ್ರಹಿಸಿದ್ದರು. ಆದರೆ ಪೊಲೀಸರು ಸಾಥಿಯಾನ ಶವ ಕೊಡಲು ಒಪ್ಪಲಿಲ್ಲ. ಅವನ ಸಂಬಂಧಿಕರಿಗೆ ಮಾತ್ರ ಶವ ಕೊಡುತ್ತೇವೆ ಎಂದು ಹೇಳುತ್ತಿದ್ದರು."

"ಇದೆಂಥ ಮಾತಿದು? ನಾವೇನು ಅವನ ಸಂಬಂಧಿಕರಿಗಿಂತ ಕಡಿಮೆಯವರೆ?" ನಾನು ಕೇಳಿದೆ.

"ಮಮತಾ, ನೀನು ನಿಮ್ಮ ತಂದೆಯವರನ್ನು ಕರೆದುಕೊಂಡು ಬಾ. ನಾನು ಅವರೊಂದಿಗೆ ಪೊಲೀಸ್ ಸ್ಟೇಶನ್ನಿಗೆ ಹೋಗಿಬರುತ್ತೇನೆ. ಅವರು ಸಾಥಿಯಾನ ದೇಹವನ್ನು ನಮಗೆ ಹೇಗೆ